# ಸಣ್ ಮಕ್ಕಳ ದೊಡ್ ಮಾತು

## ಕುಟುಂಬಕ್ಕೆ ಎರಡನೇ ಮಗುವಿನ ಪ್ರವೇಶವಾದ ಕೂಡಲೇ ಮೊದಲನೆಯ ಮಗು ಬೇಗನೇ ದೊಡ್ಡದಾಗಿಬಿಡುತ್ತದೆ

■ ಸ್ವಯಂಪ್ರಭಾ



'ಶೀನೀ, ನೀ ದೊಡ್ಡೋನಲ್ವ, ತಂಗಿಗೆ ಜಾಗಬಿಟ್ಟುಕೊಡು... ಸೋಫಾದಿಂದ ಇಳಿ... ಅವಳು ಚಿಕ್ಕೋಳಲ್ವ...' ಎಂದು ಅಮ್ಮ ಹೇಳಿದ ಕೂಡಲೇ ಶೀನಿ ಕೆಳಗಿಳಿದು ಮತ್ತೊಂದು ಕುರ್ಚಿಯಲ್ಲಿ ಕುಳಿತ. ಅವನೆಷ್ಟು ದೊಡ್ಡವನು ಅಂತೀರಿ. ಒಂದನೇ ಕ್ಲಾಸಿನಲ್ಲಿ ಓದುತ್ತಿದ್ದಾನಷ್ಟೆ. ತಂಗಿಗೆ ಇನ್ನೂ ಎರಡು ವರ್ಷ ತುಂಬುತ್ತಿದೆಯಷ್ಟೇ.

ಅವಳು ಸೋಫಾ ಏರುವುದನ್ನು ಕಲಿತದ್ದೇ ಇತ್ತೀಚೆಗೆ. ಅವಳಂತೆಯೇ ಶೀನಿ ಕೂಡ ಒಂದು ವರ್ಷ ದಾಟಿದ ಸಂದರ್ಭದಲ್ಲಿ, ಹೀಗೆಯೇ ಎದ್ದುಬಿದ್ದು ಸೋಫಾ ಏರುವುದನ್ನು ಕಲಿತವನು. ಆದರೆ ತನ್ನದೇ ಏಳುಬೀಳಿನ ನಡೆಯನ್ನು ಅಷ್ಟು ಚಿಕ್ಕ ವಯಸ್ಸಿನಲ್ಲಿ ನೆನಪಿಡುವುದು ಸಾಧ್ಯವಿಲ್ಲವಲ್ಲ. ಹಾಗಾಗಿ ತಂಗಿಯ ನಡೆಯನ್ನು ಅವನು ಕುತೂಹಲದಿಂದ ನೋಡುತ್ತಾನೆ. ಅವಳು ಇತ್ತೀಚೆಗೆ ಅಂಬೆಗಾಲಿಟ್ಟುಕೊಂಡು ಇಡೀ ಮನೆಯಲ್ಲಿ ಅತ್ತಿಂದಿತ್ತ ಓಡಾಡುತ್ತಿದ್ದಳು. ಆಗೆಲ್ಲ ಶೀನಿಗೆ ಬಹಳ ಕುತೂಹಲ. ಅವಳು ಅಂಬೆಗಾಲಿಡುತ್ತ, ಓಡುತ್ತ... ಗೋಡೆಯನ್ನು ಆಧರಿಸಿ ಎರಡೇ ಕ್ಷಣ ಎದ್ದು ನಿಂತದ್ದನ್ನು ಅವನು ನೋಡಿದ್ದಾನೆ. ಅವಳು ದುಡುಮ್ಮನೆ ಬಿದ್ದಕೂಡಲೇ ಅವನು ಧಾವಿಸಿ ಓಡಿದ್ದಾನೆ. ಆದರೆ ಅವಳು ಅಳಲೇ ಇಲ್ಲ. ಎರಡು ಹಲ್ಲುಗಳನ್ನು ತೋರಿಸಿಕೊಂಡು ಹೀ... ಎಂದು ನಗುತ್ತಿದ್ದುದನ್ನು ನೋಡಿ ಬೆರಗಾಗಿದ್ದಾನೆ. ಮುನ್ನೆಚ್ಚರಿಕೆ ಕ್ರಮವಾಗಿ, ತಂಗಿ ಎದ್ದು ನಿಂತು ನಡೆಯುವಾಗಲೆಲ್ಲ ಒಂದು ಮೆತ್ತನೆಯ ದಿಂಬು ಹಿಡಿದುಕೊಂಡು ಅವಳ ಹಿಂದೆಯೇ ಹೋಗಲು ಶೀನಿ ಶುರು ಮಾಡಿದ್ದ. ಅವಳು ಬೀಳುತ್ತಾಳೇನೋ ಅನಿಸಿದಾಗ, ಚಕ್ಕನೆ ಅವಳು ದಿಂಬಿನ ಮೇಲೆಯೇ ಬೀಳುವಂತೆ ನೋಡಿಕೊಳ್ಳುತ್ತಿದ್ದ.

'ಅಯ್ಯೋ... ಅವಳು ನಡೆಯೋದು ಕಲೀತಾಳೆ, ನೀನು ಶಾಲೆಗೋಗು. ನೀನೂ ಹೀಗೇ ಬಿದ್ದು ಎದ್ದೇ ನಡೆಯೋಕೆ ಕಲಿತಿದ್ದು' ಎಂದು ಶೀನಿಯ ಅಮ್ಮ ಗದರುತ್ತಿದ್ದರು. ಆದರೂ ಶೀನಿಗೆ ತನ್ನ ತಂಗಿ ಬಿದ್ದು ಏಟು ಮಾಡಿಕೊಳ್ಳುತ್ತಾಳೆ ಎಂಬ ಆತಂಕ. ಅವನೊಮ್ಮೆ ಶಾಲೆಯಿಂದ ಬರುವಾಗ, ತಂಗ್ಯಮ್ಮನಿಗಾಗಿ ಐಸ್ ಕ್ಯಾಂಡಿಯನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ತುಂಬಿಕೊಂಡು ತಂದಿದ್ದ. ಮನೆ ತಲುಪುವಷ್ಟರಲ್ಲಿ ಕವರ್ ತುಂಬಾ ಬಣ್ಣದ ನೀರು. ತನಗಿಷ್ಟವಾಗಿರುವುದನ್ನೆಲ್ಲ ತಂಗಿಗೆ ಕೊಡಬೇಕು ಎಂಬ ಧ್ಯೇಯದಿಂದಲೇ ಅವನು ಮನಸ್ಸಿಲ್ಲದ ಮನಸ್ಸಿನಿಂದ ಶಾಲೆಗೆ ಹೋಗುತ್ತಿದ್ದ. ಕೊನೆಗೆ, ಅಮ್ಮನೇ ಒಂದುದಿನ, 'ನೋಡು ನೀನೀಗ ಶಾಲೆಗೆ ಹೋಗಿ ಚೆನ್ನಾಗಿ ಓದಿಕೋ. ಆಗ ತಂಗ್ಯಮ್ಮನಿಗೆ ಓದಲು ಕಷ್ಟವಾದರೆ ನೀನು ಹೇಳಿಕೊಡಬಹುದಲ್ವ?' ಎಂದು ಉಪಾಯವಾಗಿ ಹೇಳಿದ್ದರು. ಈ ಲಾಜಿಕ್ಕು ಶೀನಿಗೆ ಬಹಳವೇ ಇಷ್ಟವಾಗಿ ಅವನು ತಾನಾಗಿಯೇ ಶಾಲೆಗೆ ಹೊರಟು ನಿಲ್ಲುತ್ತಿದ್ದ.

ಹೀಗೆ ಇಬ್ಬರು ಮಕ್ಕಳ ಪರಿಚಯಾತ್ಮಕ ಹಂತವೊಂದು ಬಹಳ ಸುಂದರವಾಗಿರುತ್ತದೆ. ದೊಡ್ಡ ಮಗುವಿನ ಕುತೂಹಲದ ಕಣ್ಣುಗಳು, ಆ ಕುರಿತ ಪ್ರಶ್ನೆಗಳು ಮನೆಯಲ್ಲಿ ನಗುವಿನ ಕಲರವ ಮೂಡಿಸುತ್ತದೆ.

ಅಣ್ಣ ತಂಗಿಯ ಒಡನಾಟವು ಮನೆಯ ತುಂಬೆಲ್ಲಾ ಕಲರವವನ್ನು ತುಂಬುತ್ತಿರುವಂತೆಯೇ ಅಲ್ಲೊಂದು ಬದಲಾವಣೆಯನ್ನು ಕೆಲವೊಮ್ಮೆ ಯಾರೂ ಗುರುತಿಸುವುದಿಲ್ಲ. ದೊಡ್ಡ ಮಗುವು, ತಂಗಿಯನ್ನೋ ತಮ್ಮನನ್ನೋ ತಾನೇ ಸಲಹಬೇಕು ಎಂಬ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು. ಇದ್ದಕ್ಕಿದ್ದಂತೆಯೇ ಗಂಭೀರವಾಗಿಬಿಡುವುದು. ಮನೆಯಲ್ಲಿ ಪೋಷಕರೂ, ಬಂಧುಗಳೂ ಅದೇ ರೀತಿಯಲ್ಲಿ ಮಾತನಾಡುವುದು.

'ಶೀನಿ, ಆಯ್ತಲ್ಲೋ... ನಿಂಗೆ ತಂಗಿ ಬಂದ್ಲು. ಇನ್ನು ಅವಳ ಮದುವೆ ಮಾಡೋ ಜವಾಬ್ದಾರಿ ನಿಂಗೆ ಬಂತು ನೋಡು' ಎಂದು ದೊಡ್ಡಮ್ಮ ಹೇಳುತ್ತಿದ್ದರು. ಅದನ್ನು ಕೇಳಿಸಿಕೊಂಡ ಶೀನಿ, ಹಲವು ದಿನಗಳ ಕಾಲ, 'ನಾನೇ ಮದ್ವೆ ಮಾಡ್ತೀನಿ ಅವಳಿಗೆ' ಎಂದು ಹೇಳುತ್ತ ದೊಡ್ಡವನಂತೆ ಓಡಾಡುತ್ತಿದ್ದ. ಅವನ ಮಾತುಗಳನ್ನು ಕೇಳಿಸಿಕೊಂಡು ಎಲ್ಲರೂ ನಕ್ಕುಬಿಡುತ್ತಿದ್ದರು.

ಕುಟುಂಬಕ್ಕೆ ಎರಡನೇ ಮಗುವಿನ ಪ್ರವೇಶವಾದ ಕೂಡಲೇ ಮೊದಲನೆಯ ಮಗು ಬೇಗನೇ ದೊಡ್ಡದಾಗಿಬಿಡುತ್ತದೆ. ಹಿರಿಯ ಸ್ಥಾನದಲ್ಲಿರುವ ಸಣ್ಣ ಮಕ್ಕಳು ಜವಾಬ್ದಾರಿಯುತವಾಗಿ ವರ್ತಿಸತೊಡಗುತ್ತಾರೆ. ಅಲ್ಲೀವರೆಗೆ ಕಿಲಕಿಲ ಎಂದು ಮಾತನಾಡಿಕೊಂಡಿರುತ್ತಿದ್ದವರು, ಒಮ್ಮೆಗೆ ಮೌನಿಗಳಾಗುತ್ತಾರೆ.

ಕೆಲವೊಮ್ಮೆ ಹೊಸ ಸದಸ್ಯರನ್ನು ಸ್ವೀಕರಿಸಲು ಅವರು ಸ್ವಲ್ಪ ಸಮಯ ತೆಗೆದುಕೊಳ್ಳಲೂಬಹುದು. ಅಮ್ಮನೇಕೋ ತನ್ನನ್ನು ಸರಿಯಾಗಿ ಮಾತನಾಡಿಸುತ್ತಿಲ್ಲ ಎಂಬ ಬೇಸರವೊಂದು ಅವರ ಮನದ ಮೂಲೆಯಲ್ಲಿ ಚಿಗುರೊಡೆಯುವುದುಂಟು. ಅಲ್ಲೀವರೆಗೆ ಇಡೀ ಮನೆಯಲ್ಲಿ ವಿಧಿ–ನಿಷೇಧಗಳಿಲ್ಲದೇ ಓಡಾಡಿಕೊಂಡಿದ್ದ ಅವರಿಗೆ, ಹಲವಾರು ನಿಯಮಗಳನ್ನು ಎದುರಿಸಬೇಕಾದ ಸಂದರ್ಭ ಎದುರಾಗುತ್ತದೆ. ಅಮ್ಮನ ಆದ್ಯತೆಯ ಕೇಂದ್ರವೀಗ ನಾನಲ್ಲ ಎಂಬ ಅರಿವು ಮೂಡದಂತೆ ಅವರನ್ನು ಕಾಳಜಿ ಮಾಡುವುದು ಮುಖ್ಯ.

'ಹೆಜ್ಜೆ ಸದ್ದು ಮಾಡಬೇಡ, ಗಟ್ಟಿ ಮಾತನಾಡಬೇಡ, ಕಾರ್ಟೂನು ನೋಡಬೇಡ, ಮತ್ತೆ ಜೋರಾಗಿ ಅಳಲೂಬೇಡ' ಎಂದೆಲ್ಲ ಹೇರಲಾಗುವ ನಿಷೇಧಾಜ್ಞೆಗಳು ಎಳೆಯರನ್ನು ತಬ್ಬಿಬ್ಬು ಮಾಡಬಹುದು. ಆದ್ದರಿಂದ ಪೋಷಕರು ಎರಡನೇ ಮಗುವಿನ ನಿರೀಕ್ಷೆಯಲ್ಲಿ ಇರುವಾಗಲೇ, ದೊಡ್ಡ ಮಗುವಿನ ಮನಸ್ಸನ್ನು ಸಿದ್ಧ ಮಾಡುವುದೂ ಅಗತ್ಯ. ಹೊಸ ಪಾಪುವಿನ ಜೊತೆಗೆ ಹೇಗಿರಬೇಕು ಎಂಬ ನಿಟ್ಟಿನಲ್ಲಿ ಅವರೊಡನೆ ಆಗಾಗ ಮಾತುಕತೆ ನಡೆಸುತ್ತಿರುವುದು ಒಳ್ಳೆಯದು. ಇಂತಹ ಸಂದರ್ಭಗಳನ್ನು ನಿಭಾಯಿಸುವ ಹೊಣೆ ಹೆಚ್ಚಾಗಿ ಅಪ್ಪನದ್ದಾದರೆ ಒಳ್ಳೆಯದು. ಮನೆಯಲ್ಲಿ ಅಜ್ಜಿಯೋ ಅಜ್ಜನೋ ಇದ್ದರೆ ಇನ್ನಷ್ಟು ಚಂದದ ಕ್ಷಣಗಳನ್ನು ಸೃಷ್ಟಿಸಬಹುದು.

ಪ್ರತಿಕ್ರಿಯಿಸಿ: feedback@sudha.co.in